

ಡಾ.ವಿನೋದ ಛೆಬ್ಬಿ

**ಪರಸಂಬಂಧಗಳು ಸ್ವಂತಿಕೆಯ ಅಭಿವ್ಯಕ್ತಿಗೆ ಅದ್ಭುತ ಅವಕಾಶ ಕೊಡುತ್ತವೆ.**

# 142: ಪರಸಂಬಂಧಗಳು-5

ಪರಸಂಬಂಧಗಳ ಹಿಂದಿರುವ ಮನೋಸಾಮಾಜಿಕ ಹಾಗೂ ಪಾರಸ್ಪರಿಕ ಕಾರಣಗಳ ಬಗೆಗೆ ಮುಕ್ತ ಚರ್ಚೆ ಮಾಡುತ್ತಿದ್ದೇವೆ.

ನಾನು ಈ ಮುಂಚೆ 'ಸುಖೀಭವ'ದಲ್ಲಿ ಲೈಂಗಿಕತೆಯ ವಿಷಯಗಳ ಬಗೆಗೆ ಪರಿಹಾರ ಸೂಚಿಸುತ್ತಿದ್ದುದು ನಿಮಗೆ ನೆನಪಿರಬಹುದು. ಆಗ ಕೇಳುತ್ತಿದ್ದ ಪ್ರಶ್ನೆಗಳಲ್ಲಿ ಹೆಚ್ಚಿನವುಗಳ ಉದ್ದೇಶ ಒಂದೇ: ಕಾಮಕೂಟದಲ್ಲಿ ಸಂಗಾತಿಯನ್ನು ತೃಪ್ತಿಪಡಿಸುವುದು ಹೇಗೆ? ಸಾಕಷ್ಟು ಕಾಮತೃಪ್ತಿ ಕೊಟ್ಟುಬಿಟ್ಟರೆ ಸಂಗಾತಿಯು ಹೊರಸಂಬಂಧಕ್ಕೆ ಮನಸ್ಸು ಮಾಡುವುದಿಲ್ಲ ಎನ್ನುವ ನಂಬಿಕೆ ಜನಜನಿತವಾಗಿದೆ. ಅದಕ್ಕೆಂದೇ ವಿವಾಹಿತರು ಹೊರಸಂಬಂಧ ಇಟ್ಟುಕೊಳ್ಳುವವರಿಗೆ ದಾಂಪತ್ಯದಲ್ಲಿ ಸಾಕಷ್ಟು ಸುಖ ಸಿಗುತ್ತಿರಲಿಕ್ಕಿಲ್ಲ ಎಂದು ಅಂದಾಜಿಸುವುದು ಸಾಮಾನ್ಯವಾಗಿದೆ. ಆದರೆ ಇದು ಎಲ್ಲ ಸಂದರ್ಭಗಳಲ್ಲೂ ಸರಿಯೆನ್ನುವಂತಿಲ್ಲ. ಸಾಕಷ್ಟು ಲೈಂಗಿಕ ತೃಪ್ತಿ ಇರುವವರಲ್ಲೂ ಪರಸಂಬಂಧ ನಡೆಯುತ್ತದೆ ಎನ್ನಲು ಸಾಕಷ್ಟು ಆಧಾರವಿದೆ. ಇದಕ್ಕೇನು ಕಾರಣ ಇರಬಹುದು?

ನಮ್ಮ ದಾಂಪತ್ಯದಲ್ಲಿ ಕೌಟುಂಬಿಕ ಭದ್ರತೆಗಾಗಿ ಸಂಗಾತಿಯನ್ನು ಆರಿಸಿಕೊಳ್ಳಲು ಕೆಲವು ಅಳತೆಗೋಲುಗಳು ಮುಖ್ಯವಾಗಿವೆ (ಉದಾ. ಸರಕಾರಿ ಉದ್ಯೋಗ, ವಿದೇಶದಲ್ಲಿರುವ ಅವಕಾಶ, ಪ್ರತಿಷ್ಠಿತ ಮನೆತನ). ಅವುಗಳು ಒಪ್ಪಿಗೆಯಾದರೆ ಸಾಕು, ಹೆಚ್ಚು ಚರ್ಚೆಯಿಲ್ಲದೆ ಮದುವೆ ನಡೆದುಬಿಡುತ್ತದೆ. ಹೆಣ್ಣಿನ ಸಂತಾನೋತ್ಪತ್ತಿಗೆ ಅಗತ್ಯವಾದ ಭದ್ರತೆಯೇ ಇಲ್ಲಿ ಒರೆಗಲ್ಲು. ಇದಕ್ಕೆ ಸ್ಪಂದಿಸುವಂತೆ, ಸಂತಾನ ಬೇಡವಾದರೆ ಸದ್ಯಕ್ಕೆ ಲೈಂಗಿಕ ಚಟುವಟಿಕೆಯೂ ಬೇಡ ಎನ್ನುವಂತಾಗಿ, ಇತ್ತೀಚೆಗೆ ಕಾಮರಹಿತ ದಾಂಪತ್ಯಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಜೊತೆ ಜೊತೆಗೆ ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಹಾಗೂ ಗರ್ಭನಿರೋಧದ ಉಪಾಯಗಳು ಬಂದಮೇಲೆ ಲೈಂಗಿಕ ಚಟುವಟಿಕೆಯು ಸಂತಾನೋತ್ಪತ್ತಿಯ ಕಾರ್ಯದಿಂದ ಕಳಚಿಕೊಂಡು ಸ್ವತಂತ್ರವಾಗಿದೆ. ಮುಂಚೆ ಪುರುಷರಿಗೆ ಹೆಚ್ಚಿಗಿದ್ದ ಪರಸಂಬಂಧದ ಅವಕಾಶವು ಸ್ತ್ರೀಯರಿಗೂ ಸಾಕಷ್ಟು ಸಿಗುತ್ತಿದೆ. ಹಾಗಾಗಿ, ಅಂತೋನಿ ಗಿಡೆನ್ ಹೇಳುವಂತೆ ಲೈಂಗಿಕ ಅಭಿವ್ಯಕ್ತಿಯು ಸ್ವಂತ ವ್ಯಕ್ತಿತ್ವದ ಭಾಗವಾಗಿ ಹೊರತೋರಲು ಆರಂಭಿಸಿದೆ. ಇದರಲ್ಲಿ ಪರಸಂಬಂಧವೂ ಸೇರಿದೆ. ಹೀಗಾಗಿ ಪರಸಂಬಂಧದ ಹೊಳಹುಗಳನ್ನು ಅರಿಯಲು ಅದನ್ನು ಸಾಮಾಜಿಕ ಪ್ರಭಾವದಿಂದ ಬೇರ್ಪಡಿಸಿ ನೋಡಬೇಕಾಗುತ್ತದೆ.

ಪರಸಂಬಂಧಗಳಲ್ಲಿ ಒಳಗೊಂಡ, ಹಾಗೂ ಅದರಿಂದ ಹೊರಬಂದ ಜನರ ಅನುಭವವನ್ನು ತೆರೆದ ಮನಸ್ಸಿನಿಂದ ಅರ್ಥಮಾಡಿಕೊಳ್ಳುವಾಗ ಏನು ವಿಶೇಷ ಕಾಣಬಹುದು?

ಒಮ್ಮೆ ಪರವ್ಯಕ್ತಿಯ ಬಗೆಗೆ ವ್ಯಾಮೋಹ ಹುಟ್ಟುತ್ತದಲ್ಲವೆ? ಆತ/ಆಕೆ ಸಿಗದಿರುವಾಗ ಆಗುವ ವಿರಹವು ಕೂಡುವ ಆಸೆಯನ್ನು ಹೆಚ್ಚು ತೀವ್ರವಾಗಿ ಮಾಡುತ್ತದೆ. ಕಾಮದ ಸೆಳೆತಕ್ಕೆ ಪರಸಂಬಂಧವು ಹೇಳಿಮಾಡಿಸಿದಂತಿದೆ. ಇಲ್ಲಾಗುವ ಕಲ್ಪನೆಗಳು ವಾಸ್ತವವಾಗಿ ಅನುಭವಿಸುವುದಕ್ಕಿಂತ ಹಲವು ಪಟ್ಟು ಶ್ರೀಮಂತ ಆಗಿರುತ್ತವೆ. ಆದರೆ ಪರಸಂಗಾತಿಯನ್ನು ಕೂಡಲು ಅಡ್ಡಿಯಿದೆಯಲ್ಲ? ಜಾಕ್ ಮೋರಿನ್ ಅವರ ಅಭಿಪ್ರಾಯದಲ್ಲಿ ಪರಸಂಗಾತಿಯ ಬಗೆಗಿನ ಸೆಳೆತ, ಹಾಗೂ ಅವರನ್ನು ಕೂಡಲು ಇರುವ ಅಡ್ಡಿ ಎರಡೂ ಸೇರಿ ಪರಸಂಗಕ್ಕೆ ತೀವ್ರ ಪ್ರಚೋದನೆ ಕೊಡುತ್ತವೆ. ಪರಸಂಬಂಧ ಹೊಂದಿರುವವರು ಕೆಲವು ಸಲ ಮಾತ್ರ ಕಾಮಕೂಟದಲ್ಲಿ ಒಳಗೊಂಡಿದ್ದಾರೆ ಎಂದರೂ ಅದಕ್ಕಾಗಿ ತಿಂಗಳುಗಟ್ಟಲೆ ಭಾವನೆಗಳ ತಾಲೀಮು ನಡೆದಿರುತ್ತದೆ.

ಪರಸಂಗಕ್ಕೆ ತೊಡಗಿದವರಲ್ಲಿ ಹೆಚ್ಚಿನವರು ಬದ್ಧ ಸಂಗಾತಿಯ ಜೊತೆಗೂ ಚೆನ್ನಾದ ಲೈಂಗಿಕ ಸಂಬಂಧ ಇಟ್ಟುಕೊಂಡಿರುತ್ತಾರೆ. ನನಗೆ ಗೊತ್ತಿರುವ ಒಬ್ಬಳು ತನ್ನ ಗಂಡನ ಜೊತೆಗಲ್ಲದೆ ಇನ್ನೊಬ್ಬನ ಜೊತೆಗೂ ಶಾರೀರಿಕ ಸಂಬಂಧ ಇಟ್ಟುಕೊಂಡಿದ್ದಾಳೆ. ಅದಕ್ಕಾಗಿ ಆಕೆಗೆ ತಪ್ಪಿತಸ್ಥ ಭಾವ ಇದೆಯೆ ಎಂದು ಕೇಳಿದಾಗ, ಇಲ್ಲವೆಂದೇ ಹೇಳಿದಳು. ಯಾಕೆಂದರೆ ಗಂಡನೊಡನೆ ಸಿಗುತ್ತಿರುವುದೇ ಬೇರೆ, ಸ್ನೇಹಿತನೊಡನೆ ಸಿಗುತ್ತಿರುವುದೇ ಬೇರೆ ಎಂದು ಹೇಳಿದಳು. ಯಾಕೆಂದರೆ ಸಮಯ, ಬಂಧುತ್ವ, ಸಾಹಚರ್ಯ, ಸ್ಥಿರತೆಗಳನ್ನು ಕೊಡುವವರು ರೋಚಕತೆ, ಹೊಸತನ, ಸವಾಲು ಹಾಗೂ ಸಾಹಸಕ್ಕೆ ಅವಕಾಶ ಮಾಡಿಕೊಡಬೇಕೆಂದೇನೂ ಇಲ್ಲ. ಪರಸಂಬಂಧಗಳು ನಾನಾ ಹೊಸ ಸನ್ನಿವೇಶವನ್ನು ಒಳಗೊಳ್ಳುವುದರಿಂದ ಪ್ರತಿಸಲ ಹೊಸದಾದ ಅನುಭವವನ್ನು ನೀಡುತ್ತವೆ.

ಪರಸಂಬಂಧಗಳು ಪರಸಂಗಾತಿಯ ಬಗೆಗೆ ಆಳವಾದ ಪರಿಚಯ ಇಲ್ಲದೆ ಆಗುವುದರಿಂದ, ಹಾಗೂ ಅವರೊಡನೆ ವಾಸಿಸಿ ಅರ್ಥಮಾಡಿಕೊಳ್ಳುವ ಪ್ರಸಂಗ ಇಲ್ಲದಿರುವುದರಿಂದ ಇಲ್ಲಿ ವ್ಯಕ್ತಿಗತ ದೋಷಗಳು, ಹಾಗೂ ಪರಸ್ಪರರ ಭಿನ್ನಾಭಿಪ್ರಾಯಗಳು ಅಡ್ಡಿಬರುವುದಿಲ್ಲ. ಹಾಗಾಗಿ ಇಲ್ಲಾಗುವ ಅನುಭವ ಅದ್ಭುತವಾಗಿರುತ್ತದೆ. ಅಷ್ಟಲ್ಲದೆ ಇಬ್ಬರ ನಡುವೆ ವಿಶೇಷ ಗೋಡೆಗಳು ಇಲ್ಲದಿರುವಾಗ ಸೆಳೆತವು ಪಾರದರ್ಶಕವಾಗಿರುತ್ತದೆ. ಇದರ ಅನುಭವವನ್ನು ಪದಗಳಲ್ಲಿ ವರ್ಣಿಸಲು ಆಗದು. ದುರದೃಷ್ಟವಶಾತ್ ಹೆಚ್ಚಿನ ದಂಪತಿಗಳು ಈ ಮಟ್ಟಕ್ಕೆ ಹೋಗುವುದನ್ನು ಕಲ್ಪನೆಯಲ್ಲೂ ತರಲಾರರು.

ಪರಸಂಬಂಧದಲ್ಲಿ ಅವಿರತ ಕಾಮಕ್ರಿಯೆ ಇರಬಹುದು, ಆದರೆ ಕಾಮದ ರಸಾನುಭೂತಿಗೆ ವಾಸ್ತವವಾದ ಸಂಭೋಗವೇ ಬೇಕೆಂದಿಲ್ಲ. ಒಂದೇ ಒಂದು ಮುತ್ತು ಕೂಡ ಕಾಮಕ್ರಿಯೆಯಷ್ಟೇ ಸುಖ ಕೊಡಬಲ್ಲುದು. ಯಾಕೆಂದರೆ ಇಲ್ಲಿ ಬಿಡುಗಡೆಯಾಗುವ ಕಾಮದ ಶಕ್ತಿ ಅಷ್ಟೇ ಇರುತ್ತದೆ. 'ಇದು ನಾನು' ಎನ್ನುವ ಲೈಂಗಿಕ ಅರಿವು, ಅದಕ್ಕೆ ಅಂಟಿರುವ ಸೆಳೆತ, ಅದರ ಹೊಳಪು, ಹಾಗೂ ಅದರ ಬಗೆಗೆ ಕಲ್ಪನೆ- ನಿರೀಕ್ಷೆಗಳೇ ಮೈಮನಗಳನ್ನು ಅರಳಿಸಲು ಸಾಕು. ಎಸ್ತರ್ ಪೆರೆಲ್ ಪ್ರಕಾರ, ಸತ್ತಂತಿರುವ ಕಾಮಾಗ್ನಿಯನ್ನು ಪುನಃ ಜೀವಂತವಾಗಿಸುವುದು, ನಾನು ಬದುಕಿದ್ದೇನೆ ಎಂದು ಪುನಃ ಪುನಃ ಖಚಿತಪಡಿಸಿಕೊಳ್ಳುವುದು, ಇನ್ನೊಂದು ವ್ಯಕ್ತಿಯನ್ನು ತನ್ನದಾಗಿಸಿಕೊಳ್ಳುವ ತನ್ನ ಪ್ರಭಾವವನ್ನು ಮೆಚ್ಚಿಕೊಳ್ಳುವುದು ಇದೆಲ್ಲ ನಡೆಯುತ್ತದೆ. ದಾಂಪತ್ಯದಲ್ಲಿದ್ದೂ ಏಕಾಂಗಿಯಾಗಿರುವ ವ್ಯಕ್ತಿಗಂತೂ ಈ ಅನುಭವ ಪುನರ್ಜೀವನ ನೀಡುತ್ತದೆ. ತನಗೇನು ಬೇಕೆಂಬುದನ್ನು ಅರಿತುಕೊಂಡು ಅದನ್ನು ಪಡೆದುಕೊಳ್ಳುತ್ತಿರುವಾಗ– ರಹಸ್ಯವಾಗಿ ಆದರೂ ಸರಿ – ಒಂದು ಬಗೆಯ ಸ್ವಾತಂತ್ರ್ಯ, ಸ್ವಾಯತ್ತತೆ, ಸ್ವಪ್ರಭುತ್ವದ ಅನುಭವ ಉಂಟಾಗುತ್ತದೆ.

ಪರಸಂಬಂಧ ನಡೆಸುವವರು ಜೊತೆಜೊತೆಗೆ ಆತ್ಮವಿಶ್ಲೇಷಣೆಯನ್ನೂ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತದೆ. ಅನೇಕರು ಸಂಬಂಧ ಮುಗಿದು ಮರಳಿದ ನಂತರ ಬದ್ಧಸಂಗಾತಿಯೊಡನೆ ವ್ಯವಹರಿಸಲು ಹಿಂಜರಿಯುತ್ತಾರೆ. ಕಾರಣವಿಲ್ಲದೆ ಅತಿ ಒಳ್ಳೆಯವರಾಗಿ ವರ್ತಿಸುತ್ತಾರೆ. ಸಂಗಾತಿಗೆ ಅನ್ಯಾಯ ಮಾಡುತ್ತಿದ್ದೇನೆ ಎಂಬ ತಪ್ಪಿತಸ್ಥ ಭಾವವು ಇದರ ಹಿಂದಿದೆ. ಹೆಚ್ಚಿನವರಿಗೆ ತಾನು ದಾಂಪತ್ಯದ ನಿಯಮಗಳನ್ನು ಮುರಿಯುತ್ತಿದ್ದೇನೆ, ಸಮತೋಲ ಸ್ಥಿತಿಯನ್ನು ಅಲ್ಲಾಡಿಸುತ್ತಿದ್ದೇನೆ ಎನ್ನುವ ವಿಚಾರ ತಲೆ ತಿನ್ನುತ್ತಿದ್ದು, ಅವರ (ಅ)ಪ್ರಾಮಾಣಿಕತೆ ಅವರಿಗೇ ನಿಚ್ಚಳವಾಗುತ್ತದೆ. ತಮಗೆ ತಾವೇ ಮೋಸ ಮಾಡಿಕೊಳ್ಳುವುದನ್ನು ಗಮನಿಸುತ್ತಾರೆ. ತಮ್ಮ ನಿಜ ಸ್ವರೂಪವನ್ನು ತಾವೇ ಕಂಡುಕೊಳ್ಳುತ್ತಾರೆ. ಅನೇಕರು ತಾವು ಸರಿಯೆಂದುಕೊಂಡಿರುವ ವರ್ತನೆಯನ್ನು ಮತ್ತೆ ಪ್ರಶ್ನಿಸುತ್ತ ತಪ್ಪಿತಸ್ಥಭಾವ ಹೊಂದುತ್ತಾರೆ. ಆಗ ಮುಂಚೆ ತಾವು ಅಲಕ್ಷಿಸಿದ ವರ್ತನೆಯ ಬಗೆಗೆ ಈಗ ಎಚ್ಚರವಹಿಸುತ್ತಾರೆ. ಒಂದು ದಾಂಪತ್ಯದಲ್ಲಿ ಹೆಂಡತಿ ಕೆಲಸದಿಂದ ಕೆಲವೊಮ್ಮೆ ತಡವಾಗಿ ಬರುತ್ತಿದ್ದಳು. ಅದನ್ನು ಆಕೆಯ ಗಂಡ ಸುರಕ್ಷತೆಯ ಕಾರಣದಿಂದ ವಿರೋಧಿಸುತ್ತ ಕೆಲಸ ಬಿಡಲು ಒತ್ತಾಯಿಸುತ್ತಿದ್ದರೂ ಅದರ ಹಿಂದೆ ಅವಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಹವಣಿಕೆ ಎದ್ದುಕಾಣುತ್ತಿತ್ತು. ಹೀಗಿರುವಾಗ ಅವನು ತನ್ನ ಸಹೋದ್ಯೋಗಿ ಮಹಿಳೆಯೊಡನೆ ಸಂಬಂಧ ಇಟ್ಟುಕೊಂಡಿದ್ದು ಬಯಲಾಗಿ, ಹೆಂಡತಿಯು ಅವನನ್ನು ಬಿಟ್ಟುಹೊರಡಲು ತಯಾದಾಗ ಆತ ತಪ್ಪೊಪ್ಪಿಕೊಂಡ. ಈಗ ಹೆಂಡತಿ ಎಷ್ಟೇ ತಡ ಮಾಡಿದರೂ – ಕೆಲವೊಮ್ಮೆ ರಾತ್ರಿಯೆಲ್ಲ ಹೊರಗಿದ್ದರೂ – ಕಾಳಜಿ ಮಾಡುತ್ತಾನೆಯೇ ವಿನಾ ಅವಳ ಮೇಲೆ ಅಪನಂಬಿಕೆ ಅಥವಾ ಒತ್ತಾಯ ತೋರಿಸುವುದಿಲ್ಲ.